# ದಿನಾಂಕ–02/02/2019 ರಂದು ನಡೆದಿರುವ ವಾರ್ಡ್ ಸಮಿತಿ ಸಭೆ ನಡುವಳಿಗಳು

**ಒಟ್ಟು ಸದಸ್ಯರ ಸಂಖ್ಯೆ:12**

| | ಸದಸ್ಯರ ಹೆಸರು ಮತ್ತು ಪದನಾಮ | ಸದಸ್ಯರ ಹಾಜರು/ಗೈರು ಹಾಜರು |
|---|---|---|
| 1 | ಶ್ರೀ.ಎಸ್.ರಾಜಾ (ಬಂಡೆ ರಾಜ) (ಅಧ್ಯಕ್ಷರು) | ಹಾಜರು |
| 2 | ಶ್ರೀ.ವೆಂಕಟ ರಾವ್ (ಸದಸ್ಯರು) | ಗೈರು ಹಾಜರು |
| 3 | ಶ್ರೀ.ಗೋಪಿ (ಸದಸ್ಯರು) | ಗೈರು ಹಾಜರು |
| 4 | ಶ್ರೀಮತಿ.ಶಿಲ್ಪ (ಸದಸ್ಯರು) | ಹಾಜರು |
| 5 | ಶ್ರೀಮತಿ.ಎನ್.ಪ್ರೇಮ ಗೌಡ (ಸದಸ್ಯರು) | ಗೈರು ಹಾಜರು |
| 6 | ಶ್ರೀಮತಿ.ಮಂಜುಳ ರೆಡ್ಡಿ (ಸದಸ್ಯರು) | ಗೈರು ಹಾಜರು |
| 7 | ಶ್ರೀ.ವೆಂಕಟ ರೆಡ್ಡಿ (ಸದಸ್ಯರು) | ಹಾಜರು |
| 8 | ಶ್ರೀ.ನರಸಿಂಹಯ್ಯ (ಸದಸ್ಯರು) | ಹಾಜರು |
| 9 | ಶ್ರೀ.ರಾಜ್‌ಕುಮಾರ್ (ಸದಸ್ಯರು) | ಹಾಜರು |
| 10 | ಶ್ರೀ.ಎಸ್.ಕೆ.ನಂದ (ಸದಸ್ಯರು) | ಹಾಜರು |
| 11 | ಶ್ರೀ.ಹರಿಬಾಬು (ಸದಸ್ಯರು) | ಹಾಜರು |
| 12 | ಶ್ರೀ.ಕಿರಣ್ ಪಾಟೀಲ್(ನೋಡಲ್ ಅಧಿಕಾರಿಗಳು) | ಹಾಜರು |

**ಟಿಪ್ಪಣಿ:–** ಹಾಜರು– 08 ಜನ ಸದಸ್ಯರುಗಳು ಮತ್ತು ಗೈರು ಹಾಜರು – 04 ಜನ ಸದಸ್ಯರುಗಳು.

ಈ ಮೇಲೆ ತಿಳಿಸಿರುವಂತೆ ಒಟ್ಟು 08 ಜನ ಸದಸ್ಯರ ಉಪಸ್ಥಿತಿಯಲ್ಲಿ ದಿನಾಂಕ–02/02/2019 ರಂದು ಪೂರ್ವಾಹ್ನ 10 ಗಂಟೆ ಸಮಯದಲ್ಲಿ ಸಭೆಯನ್ನು ಪ್ರಾರಂಭಿಸಲಾಯಿತು. ಮೊದಲನೆಯದಾಗಿ ಎಸ್.ರಾಜಾ (ಬಂಡೆ ರಾಜ) ಅಧ್ಯಕ್ಷರು ರವರು ಸಭೆಯಲ್ಲಿ ಹಾಜರಿರುವ ಸದಸ್ಯರುಗಳು ಮತ್ತು ಅಧಿಕಾರಿವೃಂದದವರಿಗೆಲ್ಲಾ ಸ್ವಾಗತ ಕೋರಿದರು. ತದನಂತರ ಈ ಕೆಳಕಂಡ ವಿಷಯಗಳ ಬಗ್ಗೆ ಈ ಸಭೆಯಲ್ಲಿ ಚರ್ಚಿಸಲಾಯಿತು.

1. ದಿನಾಂಕ:05.01.2019 ರಂದು ನಡೆದ ಸಭೆಯ ವಿಷಯಗಳ ಬಗ್ಗೆ ಚರ್ಚಿಸಲಾಯಿತು. ಮತ್ತು ಆರೋಗ್ಯ ಇಲಾಖೆಯಿಂದ ಹಿರಿಯ ಆರೋಗ್ಯ ನಿರೀಕ್ಷಕರು ಸಭೆಯಲ್ಲಿ ಅನುಪಸ್ಥಿತಿಯಲ್ಲಿರುವುದರಿಂದ ಮುಂದಿನ ಸಭೆಯಿಂದ ಕಡ್ಡಾಯವಾಗಿ ಸದರಿ ರವರಿಗೆ ಹಾಜರಾಗಲು ತೀರ್ಮಾನಿಸಲಾಯಿತು.
2. ಸದರಿ ಸಭೆಯಲ್ಲಿ ಬೆಸ್ಕಾಂ ವತಿಯಿಂದ ಅಭಿಯಂತರರಾದ ಶ್ರೀ.ಮಂಜುನಾಥ್ ರವರು ಮತ್ತು ಲೈನ್ ಮ್ಯಾನ್ ರವರಾದ ಶ್ರೀ.ಮಂಜುನಾಥ್ ರವರಿಗೆ ಬೋರ್‌ವೆಲ್‌ಗಳು ಹಳೆಯದಾಗಿದ್ದು ವಿದ್ಯುತ್ ವ್ಯತ್ಯಾಸದಿಂದ ಪದೇ ಪದೇ ರಿಪೇರಿಯಾಗುತ್ತಿರುತ್ತದೆ. ಆದುದರಿಂದ ಹೊಸ ಬೋರ್‌ವೆಲ್‌ಗಳನ್ನು ಅಳವಡಿಸಬೇಕೆಂದು ಸಭೆಯಲ್ಲಿ ಸೂಚಿಸಲಾಯಿತು.
3. ವಿಷಯ 2 ಕ್ಕೆ ಉತ್ತರವಾಗಿ ಅಭಿಯಂತರರಾದ ಶ್ರೀ.ಮಂಜುನಾಥ್ ರವರು ವಿಜಿನಾಪುರ ವಾರ್ಡ್‌ಗೆ ಹೊಸದಾಗಿ ಸುಮಾರು 50 ಟ್ರಾನ್ಸ್‌ಫಾರಂ ಅಳವಡಿಸುವುದು ಅವಶ್ಯವಾಗಿರುತ್ತದೆ. ಆದರೆ ಈ ವಾರ್ಡ್‌ನಲ್ಲಿ ಟ್ರಾನ್ಸ್‌ಫಾರಂ ಅಳವಡಿಸಲು ಯಾವುದೇ ಜಾಗ ಲಭ್ಯವಿರುವುದಿಲ್ಲವೆಂದು ವಾರ್ಡ್ ಕಮಿಟಿ ಸಭೆಯ ಗಮನಕ್ಕೆ ತಂದು ಸೂಕ್ತ ಜಾಗ ನೀಡಲು ಮನವಿ ಮಾಡಿದರು.
4. ಇನ್ನು ಮುಂದಿನ ಸಭೆಯಲ್ಲಿ ಅನಿಮಲ್ ಹಜ್‌ಬೆಂಡರಿ ಇಲಾಖೆ ರವರು ಮತ್ತು ರೆವೆನ್ಯೂ ಇನ್ಸ್‌ಪೆಕ್ಟರ್ ರವರು ಸಹ ಸಭೆಗೆ ಕಡ್ಡಾಯವಾಗಿ ಭಾಗವಹಿಸಬೇಕೆಂದು ತೀರ್ಮಾನಿಸಲಾಯಿತು.
5. ವಾರ್ಡ್ ವ್ಯಾಪ್ತಿಯಲ್ಲಿ ಹಲವಾರು ಬೋರ್‌ವೆಲ್‌ಗಳಿಗೆ ಅನಧಿಕೃತವಾಗಿ ವಿದ್ಯುತ್ ಸಂಪರ್ಕವನ್ನು ಪಡೆದಿದ್ದು, ಅದರಿ ಸಂಪರ್ಕವನ್ನು ಕಡಿತಗೊಳಿಸಿದ್ದಲ್ಲಿ ಸಾರ್ವಜನಿಕರಿಗೆ ತೊಂದರೆಯಾಗುತ್ತದೆ. ಆದುದರಿಂದ ಸದರಿ ಅನಧಿಕೃತ ಸಂಪರ್ಕಗಳನ್ನು ಕಾನೂನಾತ್ಮಕ ರೀತಿಯಲ್ಲಿ ಸರಿಪಡಿಸಿಕೊಳ್ಳಲು ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಭಿಯಂತರರಾದ ಆದರ್ಶ್ ರವರಿಗೆ ಸೂಚಿಸಲಾಯಿತು.

Scanned with CamScanner

6. ವಾರ್ಡ್ ವ್ಯಾಪ್ತಿಯಲ್ಲಿ ಸರ್ಕಾರದ ನಿಯಮದಂತೆ 1200ಚ.ಅಡಿ ವಿಸ್ತೀರ್ಣ ಮೀರಿದ ಕಟ್ಟಡಗಳಿಗೆ ಕಡ್ಡಾಯವಾಗಿ ಮಳೆ ನೀರು ಕೊಯ್ಲು ಸಂಗ್ರಹಣೆ ಮಾಡಲೇಬೇಕಾಗಿದ್ದು, ಜನಸಾಮನ್ಯರು ಈ ವಿಷಯವನ್ನು ಗಂಭೀರವಾಗಿ ಪರಿಗಣಿಸದೆ ಇರುವುದರಿಂದ ಈ ವಿಷಯವನ್ನು ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಭಿಯಂತರಾದ ಆದರ್ಶ್ ರವರಿಗೆ ಸೂಚಿಸಲಾಯಿತು.
7. ವಿಜಿನಾಪುರ ವಾರ್ಡ್ ವ್ಯಾಪ್ತಿಯಲ್ಲಿ ರಾಜ ಕಾಲುವೆಗಳು ಮತ್ತು ಕೆರೆ ಒತ್ತುವರಿ ಕಂಡು ಬರುತ್ತಿದ್ದು, ಸದರಿ ವಿಷಯಗಳಿಗೆ ಕ್ರಮ ಕೈಗೊಳ್ಳಲು ಮುಂದಿನ ಸಭೆಯಿಂಡ ಸಾಧ್ಯವಾದರೆ ರಾಜ ಕಾಲುವೆಗಳು ಮತ್ತು ಕೆರೆ ಅಭಿವೃದ್ಧಿ ಇಲಾಖೆಯವರು ಸಭೆಗೆ ಕಡ್ಡಾಯವಾಗಿ ಭಾಗವಹಿಸಬೇಕೆಂದು ತಿರ್ಮಾನಿಸಲಾಯಿತು.
8. ವಿಜಿನಾಪುರ ವಾರ್ಡ್ ವ್ಯಾಪ್ತಿಯಲ್ಲಿನ ಆರ್.ಆರ್.ಲೇಔಟ್ ಪ್ರದೇಶದ ವಿದ್ಯುತ್ ಕಾಮಗಾರಿಗಳು ಬೇರೆ ಅಭಿಯಂತರರಿಗೆ ಒಳಪಡುವುದರಿಂದ ಮುಂದಿನ ಸಭೆಯಿಂದ ಅಭಿಯಂತರರು ಕಡ್ಡಾಯವಾಗಿ ಸಭೆಗೆ ಹಾಜರಾಗಬೇಕೆಂದು ತಿರ್ಮಾನಿಸಲಾಯಿತು.
9. ಕಸ ಸಂಗ್ರಹಣೆಗಾಗಿ ವಾರ್ಡ್‌ನ ಪೌರ ಕಾರ್ಮಿಕರು ಬೆಳಿಗ್ಗೆ 6 ಗಂಟೆಗೆ ಬರುತ್ತಿದ್ದು ಇನ್ನುಮುಂದೆ ಪೌರ ಕಾರ್ಮಿಕರಿಗೆ ಸಮಯ ಬೆಳಿಗ್ಗೆ 7 ಗಂಟೆಗೆ ಬರಬೇಕೆಂದು ತೀರ್ಮಾನಿಸಲಾಯಿತು.
10. ವಾರ್ಡ್ ಕಮಿಟಿ ಸದಸ್ಯರು ಗುರುತಿನ ಚೀಟಿ ನೀಡಬೇಕೆಂದು ವಾರ್ಡ್ ಕಮಿಟಿಯ ಕಾರ್ಯದರ್ಶಿ ರವರಿಗೆ ಮನವಿ ಮಾಡಿಕೊಂಡರು.

**ವಾರ್ಡ್ ಸಮಿತಿ ಕಾರ್ಯದರ್ಶಿಗಳು,**
**ವಾರ್ಡ್ ನಂ.51, ವಿಜಿನಾಪುರ**

ಅಧ್ಯಕ್ಷರು.
ವಾರ್ಡ್ ನಂ.51, **ವಿಜಿನಾಪುರ**

Scanned with CamScanner